


ಪ್ಯಾಸ್ಟರ್ ಟೋನಿ ಅಲಾಮೊ     ಅಲಾಮೊ ಕ್ರೈಸ್ತಮತೀಯ ರಾಷ್ಟ್ರ     ಸಂಪುಟ *21800*

# ವಿಶ್ವ ಪ್ರತಿಪಾದಕರ ಮಂಡಳಿ

**ಟೋನಿ ಅಲಾಮೊ ಅವರಿಂದ**

ನಾನು ಒಂದು ವಿಷಯ ಸ್ಪಷ್ಟಪಡಿಸುತ್ತೇನೆ. ಪ್ರಕಟನೆ 12:9ರಲ್ಲಿ ಹೇಳಿರುವಂತೆ, ಸೈತಾನನು ಸಂಪೂರ್ಣ ಜಗತ್ತನ್ನು ಮೋಸಗೊಳಿಸಿದ್ದಾನೆ ಎಂದು ದೇವರು ಹೇಳಿದಾಗ, ಆತ ಲೋಕದ ಎಲ್ಲಾ ರಕ್ಷಣೆ ಹೊಂದದ ಜನರ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು ಮರುಜನ್ಮ ಪಡೆದ ಕ್ರೈಸ್ತಮತೀಯರಾದ ನಮ್ಮ ಬಗ್ಗೆ ಅಲ್ಲ. ಏಕೆಂದರೆ ಮರುಜನ್ಮ ಪಡೆದ ಕ್ರೈಸ್ತಮತೀಯರಾದ ನಾವು ಲೋಕದಲ್ಲಿದ್ದೇವೆ, ಆದರೆ ನಾವು ಲೋಕದವರಲ್ಲ (ಯೋಹಾನ 17:14-18).[1] "ಕ್ರೈಸ್ತಮತೀಯ" ಎಂಬ ಪದವನ್ನು ಇಂದು ಬೇಕಾಬಿಟ್ಟಿಯಾಗಿ ಬಳಸಲಾಗುತ್ತಿದೆ. ಕ್ಯಾಥೊಲಿಕರು ಕ್ರೈಸ್ತಮತೀಯರಲ್ಲ, ಆದರೆ ವಿಶ್ವದ ಅತಿ ದೊಡ್ಡ ಕುಪಂಥದ ಸದಸ್ಯರಾಗಿದ್ದಾರೆ.[2]

ಲೋಕದ ಜನರು ವಿಶ್ವ ಪ್ರತಿಪಾದಕ ಮಂಡಳಿಯ ಮಾತನ್ನು ಕೇಳುತ್ತಾರೆ.[3] ಅವರು ಹುಚ್ಚುತನದ ಬೋಧಕರು – ಹುಚ್ಚರು. ಕೀರ್ತನೆಗಳು 1:1 ಹೀಗೆಂದು ಹೇಳುತ್ತದೆ, "ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು." ಈ ಸಂಪೂರ್ಣ ಲೋಕವು ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯನ್ನು ಕೇಳುತ್ತಿದೆ. ದೈವನಿಷ್ಠೆಯಿಲ್ಲದ ಎಂದರೆ ದೇವರ ವಿರುದ್ಧ ಎಂದರ್ಥ ಮತ್ತು ಲೋಕದ ರಾಜಕೀಯ ಮತ್ತು ಜೈಲಿನ ರಾಜಕೀಯಗಳಂಥ ವಿಷಯಗಳನ್ನು ಒಳಗೊಂಡಿದೆ. ಅವರೆಲ್ಲರೂ ದೈವನಿಷ್ಠೆಯಿಲ್ಲದವರು. ರಾಜಕಾರಣಿಗಳು ಕೇವಲ ಚುನಾಯಿತರಾದ ಅಧಿಕಾರಿಗಳು, ದೇವರಿಂದ ಚುನಾಯಿತರಾದವರಲ್ಲ, ಬದಲಿಗೆ ದೈವನಿಷ್ಠೆಯಿಲ್ಲದ ಜನರಿಂದ, ಸಾಮಾನ್ಯ ಜನಸಮೂಹದಿಂದ ಚುನಾಯಿತರಾದವರು. ಈ ದೈವನಿಷ್ಠೆಯಿಲ್ಲದ ಜನರು ತಾವು ಬೈಬಲ್ ಎಂದು ಕರೆಯುವ ಪುಸ್ತಕಗಳನ್ನು ಕೂಡ ಬರೆಯುತ್ತಿದ್ದಾರೆ. ಆದಾಗ್ಯೂ, ಅವು ಬೈಬಲ್‌ಗೆ ವಿರುದ್ಧವಾಗಿವೆ, ಆದ್ದರಿಂದ ಓದಲು ಬಹಳ ಅಪಾಯಕಾರಿಯಾಗಿವೆ.

ಇದರ ಒಂದು ನಿರೂಪಣೆಯನ್ನು ರೋಮಾಪುರದವರಿಗೆ 13:1ರಲ್ಲಿ ಕಾಣಬಹುದು, ಅದು ಹೀಗೆಂದು ಹೇಳುತ್ತದೆ, "ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ [ದೈವನಿಷ್ಠೆಯಿಲ್ಲದ ಸರ್ಕಾರಿ ಬೈಬಲ್‌ಗಳು ನೀವು ನಂಬಬೇಕು ಎಂದು ಬಯಸುವಂತೆ, ಚುನಾಯಿತ ಅಧಿಕಾರಿಗಳು ಎಂಬುದು ಇದರ ಅರ್ಥವಲ್ಲ]; ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ." "ಆಗ ಯೇಸು ಹತ್ತಿರಕ್ಕೆ ಬಂದು ಹೇಳಿದರು – ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28:18).

ರೋಮಾಪುರದವರಿಗೆ 13:1 ಹೀಗೆಂದು ಕೂಡ ಹೇಳುತ್ತದೆ, "ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವರು." ದೇವರು ಖಂಡಿಸುವ ಪುರುಷ ಸಲಿಂಗಕಾಮ ಅಥವಾ ಸ್ತ್ರೀ ಸಲಿಂಗಕಾಮವನ್ನು ನಿಯಾಮಕ ಮಾಡುತ್ತಾರೆಂದು ನೀವು ನಂಬುತ್ತೀರಾ?[4] ಆತ ಖಂಡಿಸುವ ಗರ್ಭಪಾತವನ್ನು – ನರಹತ್ಯೆ – ದೇವರು ನಿಯಾಮಕ ಮಾಡುತ್ತಾರೆಂದು ನೀವು ನಂಬುತ್ತೀರಾ?[5] ಹಾದರವನ್ನು, ವ್ಯಭಿಚಾರವನ್ನು, ಸುಳ್ಳುಗಾರರನ್ನು, ಕಳ್ಳರನ್ನು, ಅಥವಾ ಯಾವುದೇ ಪಾಪವನ್ನು ದೇವರು ನಿಯಾಮಕ ಮಾಡುತ್ತಾರೆಂದು ನೀವು ನಂಬುತ್ತೀರಾ?[6] ಇಲ್ಲ, ಆತ ಇಂಥ ದುಷ್ಟ ವಿಷಯಗಳನ್ನು ನಿಯಾಮಕ ಮಾಡುವುದಿಲ್ಲ! ನೀವು ಇಂಥ ದುಷ್ಟ ಕೃತ್ಯಗಳನ್ನು ಮಾಡಿದರೆ ನೀವು ಸ್ವರ್ಗಕ್ಕೆ ಹೋಗುತ್ತೀರೆಂದು ನಂಬುತ್ತೀರಾ? ನೀವು ಹೋಗುವುದಿಲ್ಲ! ನೀವು ಇಂಥ ಸುಳ್ಳುಗಳನ್ನು ನಂಬುತ್ತೀರಾದರೆ, ನೀವು ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯನ್ನು ಕೇಳುತ್ತಿದ್ದೀರಿ, ದೇವರ ಸೇವಕರ ಪ್ರತಿಪಾದನೆಯನ್ನಲ್ಲ. ದೇವರ ಪದವು ದೇವರ ಪ್ರತಿಪಾದನೆಯಾಗಿದೆ.[7]



*ಪ್ಯಾಸ್ಟರುಗಳಾದ ಟೋನಿ ಮತ್ತು ಸೂಸನ್ ಅಲಾಮೊ*



*ಸ್ವೀಡನ್ ನ ಸ್ಟಾಕ್ ಹೋಂನಿಂದ ಟೋನಿ ಅಲಾಮೊ ಅವರ ತಾತ ಮತ್ತು ಫಿನ್ಲ್ಯಾಂಡಿನ ಹೆಲ್ಸಿಂಕಿಯಿಂದ ಅವರ ಅಜ್ಜಿ*

"ಆದ್ದರಿಂದ ಅಧಿಕಾರವನ್ನು [ದೇವರು ನೇಮಿಸಿರುವ ಸುವಾರ್ತೆಯ ಸೇವಕರು] ವಿರೋಧಿಸುವವನು ದೇವರ ನೇಮಕವನ್ನು ವಿರೋಧಿಸುತ್ತಾನೆ ಮತ್ತು ವಿರೋಧಿಸುವವರು ಖಂಡನೆಗೆ ಗುರಿಯಾಗುತ್ತಾರೆ. ಕೆಟ್ಟಕೆಲಸ ಮಾಡುವವನಿಗೆ ಅಧಿಪತಿಯಿಂದ [ದೇವರ ಸೇವಕರು] ಭಯವಿರುವದೇ ಹೊರತು ಒಳ್ಳೇ ಕೆಲಸ ಮಾಡುವವನಿಗೆ ಭಯವೇನೂ ಇಲ್ಲ" (ರೋಮಾಪುರದವರಿಗೆ

*(ಪುಟ 2ರಲ್ಲಿ ಮುಂದುವರಿದಿದೆ)*

**1** ಯೋಹಾನ 1:6-13, 3:3-8, 15:18-20, 17:6-16, ರೋಮಾಪುರದವರಿಗೆ 8:7-14, 12:1-2, 1 ಕೊರಿಂಥದವರಿಗೆ 2:12, ಯಾಕೋಬನು 4:4, 1 ಯೋಹಾನ 2:15-17 **2** ವಿಮೋಚನಕಾಂಡ 20:3-5, ಯೆಶಾಯ 44:8-20, ಮತ್ತಾಯ 12:46-50, 23:9, ಲೂಕ 11:27-28, 1 ತಿಮೊಥೆಯನಿಗೆ 2:5, ಪ್ರಕಟನೆ 13:1-8, ಅಧ್ಯಾಯ 17, 18 **3** ಯೋಬನು 21:14-16, ಕೀರ್ತನೆಗಳು 2:1-5, 106:43, 107:11, ಜ್ಞಾನೋಕ್ತಿಗಳು 1:25, 30, ಯೆಶಾಯ 30:1, ಹೋಶೇಯ 4:12, ಯೋಹಾನ 8:47, 1 ಕೊರಿಂಥದವರಿಗೆ 2:12-14, 2 ಕೊರಿಂಥದವರಿಗೆ 4:3-4, 2 ಥೆಸಲೋನಿಕದವರಿಗೆ 2:10-12, 2 ತಿಮೊಥೆಯನಿಗೆ3:13, 4:3-4, 1 ಯೋಹಾನ 4:4-6 **4** ಆದಿಕಾಂಡ 19:1-13, 24-25, ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17-18, 1 ಅರಸುಗಳು 14:24, 15:11-12, ರೋಮಾಪುರದವರಿಗೆ 1:18-32, 1 ಕೊರಿಂಥದವರಿಗೆ 6:9-10, 1 ತಿಮೊಥೆಯನಿಗೆ 1:9-10, ಯೂದನು 7 **5** ಆದಿಕಾಂಡ 9:6, ವಿಮೋಚನಕಾಂಡ 20:13, 21:12, ಯಾಜಕಕಾಂಡ 24:17, ಅರಣ್ಯಕಾಂಡ 35:16-21, 30-33, ಮತ್ತಾಯ 19:18, ರೋಮಾಪುರದವರಿಗೆ13:9, ಗಲಾತ್ಯದವರಿಗೆ 5:19-21, ಯಾಕೋಬನು 2:11, ಪ್ರಕಟನೆ 22:14-15 **6** ವಿಮೋಚನಕಾಂಡ 20:14-16, ಯಾಜಕಕಾಂಡ 18:4, 20, 19:11-13, 20:10, ಧರ್ಮೋಪದೇಶಕಾಂಡ 5:18-21, ಜ್ಞಾನೋಕ್ತಿಗಳು 6:32, ಮಲಾಕಿಯ 3:5, ಮತ್ತಾಯ 5:27-28, 15:19-20, 19:18, ಮಾರ್ಕ 7:21-23, ಲೂಕ 18:20, ಯೋಹಾನ 8:44, ರೋಮಾಪುರದವರಿಗೆ 13:9, 1 ಕೊರಿಂಥದವರಿಗೆ 5:9-13, 6:9-10, 13-18, 7:2, 9, 10:7-8, 2 ಕೊರಿಂಥದವರಿಗೆ 12:21, ಎಫೆಸದವರಿಗೆ 5:3, ಕೊಲೊಸ್ಸೆಯವರಿಗೆ 3:5-6, 1 ಥೆಸಲೋನಿಕದವರಿಗೆ 4:3-5, 1 ತಿಮೊಥೆಯನಿಗೆ 1:9-10, ಯಾಕೋಬನು 2:11-12, ಯೂದನು 7, ಪ್ರಕಟನೆ 2:14, 20-22, 9:20-21, 21:8, 27, 22:15 **7** ಧರ್ಮೋಪದೇಶಕಾಂಡ 4:1-40, 6:4-9, 8:3, 11:18, ಯೆಹೋಶುವನು 1:8, ಕೀರ್ತನೆಗಳು 19:7-11, 119:1-11, ಜ್ಞಾನೋಕ್ತಿಗಳು 6:20-23, ಮತ್ತಾಯ 7:24-27, ಯೋಹಾನ 5:24, 6:63, 8:31-32, ರೋಮಾಪುರದವರಿಗೆ15:4, 2 ತಿಮೊಥೆಯನಿಗೆ 2:15, 3:15-17, 1 ಪೇತ್ರನು 2:2-3, ಪ್ರಕಟನೆ 1:2-3

# ವಿಶ್ವ ಪ್ರತಿಪಾದಕರ ಮಂಡಳಿ

*(ಪುಟ 1 ರಿಂದ ಮುಂದುವರಿದಿದೆ)*

13:2-3). ದುಷ್ಟರು ಎಂದರೆ ಜನಸಮೂಹ. ತಾವು ದೇವರ ಎದುರು ನಿಲ್ಲುವಷ್ಟು ಕಷ್ಟದಿಂದ ಪಾರಾಗಿರುವುದಾಗಿ ಚುನಾಯಿತ ಅಧಿಕಾರಿಗಳು ನಂಬುತ್ತಾರೆ. ತಾವು ಶುದ್ಧ, ಬಿಳಿ, ಮತ್ತು ಪವಿತ್ರ ಎಂದು ಅವರು ತಿಳಿದುಕೊಂಡಿದ್ದಾರೆ, ಆದರೆ ಅವರು ಜನಸಮೂಹದಷ್ಟೇ ಹೊಲಸಾಗಿದ್ದಾರೆ ಮತ್ತು ಕೊಳಕರಾಗಿದ್ದಾರೆ.[8] ಸ್ತ್ರೀಯರು ದೇವರಾಗಿದ್ದಾರೆ, ಮತ್ತು ತಮ್ಮ ಶಿಶುಗಳನ್ನು ಕೊಲ್ಲುವ ಹಕ್ಕು ಅವರಿಗಿದೆ ಎಂದು ಜನಸಮೂಹ ಹಾಗೂ ಲೋಕದ ಜನರು ನಂಬುತ್ತಾರೆ. ಸಲಿಂಗ ವಿವಾಹ, ಸಲಿಂಗ ಕಾಮ, ಹಾದರ, ವ್ಯಭಿಚಾರ, ಕಾಮಪ್ರಚೋದಕತೆ, ಮತ್ತು ಇತರ ಎಲ್ಲಾ ಪಾಪಗಳು ಸರಿ ಎಂದು ಕೂಡ ಜನಸಮೂಹವು ತನ್ನ ಮತವನ್ನು ಸೂಚಿಸಿದೆ. ಇದು ದೈವನಿಷ್ಠೆಯಿಲ್ಲದವರ ಪ್ರತಿಪಾದನೆ.

ಪುನಃ, ಕೀರ್ತನೆಗಳು 1:1 ಹೀಗೆಂದು ಹೇಳುತ್ತದೆ, “ಯಾವನು [ಜನರು] ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ......ಅವನು ಎಷ್ಟೋ ಧನ್ಯನು.” ಕ್ರಿಸ್ತರು ಪಾಪಿಷ್ಠರನ್ನು ರಕ್ಷಿಸಲು ಜಗತ್ತಿಗೆ ಬಂದರೇ ಹೊರತು (1 ತಿಮೊಥೆಯನಿಗೆ 1:15), ದುಷ್ಟರಿಗೆ ಸಾಕ್ಷಿ ಹೇಳದಂತೆ ದೇವರ ಸೇವಕರನ್ನು ತಡೆಯಲು ಪ್ರಯತ್ನಿಸುವ ದುಷ್ಟರನ್ನು ಮನ್ನಿಸುವುದಕ್ಕಾಗಲಿ ಪಾಪಿಗಳಿಗೆ ಹೇಗೆ ಸಾಕ್ಷಿ ಹೇಳಬೇಕೆಂದು ದೇವರ ಸೇವಕರಿಗೆ ಆದೇಶ ನೀಡಲು ಪ್ರಯತ್ನಿಸುವುದನ್ನು ಮನ್ನಿಸುವುದಕ್ಕಾಗಲಿ ಅಲ್ಲ. ದೈವನಿಷ್ಠೆಯಿಲ್ಲದವರು ನನ್ನ ಸಲಹೆಗಾರರಲ್ಲ, ಮತ್ತು ಅವರು ನಿಮ್ಮ ಸಲಹೆಗಾರರೂ ಆಗಿರಬಾರದು, ಏಕೆಂದರೆ, “ಯಾರು [ಜನರು] ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಇರುವರೋ......ಅವರು ಎಷ್ಟೋ ಧನ್ಯರು.” ಪ್ರಕಟನೆ 12:9ರ ಪ್ರಕಾರ, ಅವರು ಸೈತಾನನನ್ನು ಪೂಜಿಸುವ ಕಾರಣ ದಂಡನೆಗೆ ಗುರಿಯಾಗಿರುವ ಲೋಕದ ಜನರು, ಕ್ರೈಸ್ತಮತೀಯರನ್ನು, ಕ್ರಿಸ್ತರ ದೇಹವನ್ನು, ಪ್ರಭುವಿಗಾಗಿ ಆತ್ಮಗಳನ್ನು ಗೆಲ್ಲದಂತೆ, ಜನರನ್ನು ಪರಲೋಕಕ್ಕೆ ಕರೆದೊಯ್ಯದಂತೆ ತಡೆಯಲು ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ.

ಟೆಕ್ಸಾರ್ಕಾನಾದಲ್ಲಿ ಸುದ್ದಿಪತ್ರಿಕೆಯು ನಮ್ಮ ಜನರು ಯಾರಾದರೂ ಯಾವುದೇ ಕ್ರೈಸ್ತಮತೀಯ ಸಾಹಿತ್ಯವನ್ನು ವಿತರಿಸುವುದನ್ನು ನೋಡಿದರೆ, 911ಗೆ ಕರೆ ಮಾಡಲು, ಪೋಲೀಸರಿಗೆ ಕರೆ ಮಾಡಲು ಆ ಪ್ರದೇಶದಲ್ಲಿರುವ ಎಲ್ಲಾ ನಾಗರಿಕರಿಗೆ ಆದೇಶ ನೀಡಿದೆ.[9] ಆ ಪ್ರದೇಶದ ಪಾಪಿಗಳು ಸತ್ಯವನ್ನು ಕೇಳದಂತೆ ತಡೆಯಲು ಟೆಕ್ಸಾರ್ಕಾನಾದ ಆ ಸುದ್ದಿಪತ್ರಿಕೆಯು ಸಾಧ್ಯವಾದುದೆಲ್ಲವನ್ನೂ ಮಾಡುತ್ತದೆ. ರಾಷ್ಟ್ರೀಯ ಮಾಧ್ಯಮವೂ ಅದನ್ನೇ ಮಾಡುತ್ತಿದೆ. ನಾವು ಕ್ರೈಸ್ತಮತೀಯ ಸಾಹಿತ್ಯವನ್ನು ವಿತರಿಸುತ್ತೇವೆ ಎಂದು ವಿಶ್ವ ಸರ್ಕಾರವು ನಮ್ಮ ಮಕ್ಕಳನ್ನೂ ನಮ್ಮಿಂದ ತೆಗೆದುಕೊಳ್ಳುತ್ತಿದೆ. ಅವರು ನಮ್ಮ ಕ್ರೈಸ್ತದೇವಾಲಯವನ್ನು ನಡೆಸುವರೆಂದು ದೇವರ ಪ್ರತಿಪಾದನೆಗೆ ವಿರುದ್ಧವಾದವರು ನಮಗೆ ಹೇಳುತ್ತಿದ್ದಾರೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸರ್ಕಾರವು ನಮ್ಮ ಚರ್ಚ್ ಅನ್ನು ನಡೆಸುತ್ತದೆ ಎಂದು ಅವರು ಅಂದುಕೊಳ್ಳುತ್ತಾರೆ. ಇಲ್ಲ, ಅವರು ಹಾಗೆ ಮಾಡುವುದಿಲ್ಲ! ನಾವು ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯಂತೆ ನಡೆಯುವುದಿಲ್ಲ, ಪಾಪಿಗಳ ಮಾರ್ಗದಲ್ಲಿ ನಿಂತುಕೊಳ್ಳುವುದಿಲ್ಲ, ಅಥವಾ ಧರ್ಮನಿಂದಕರೊಡನೆ (ದೇವರ ಪದದ ವಿರುದ್ಧ ಕೋಪಗೊಂಡವರು) ಕೂತುಕೊಳ್ಳುವುದಿಲ್ಲ. ನಮ್ಮ ಆನಂದ ಯೆಹೋವನ ಧರ್ಮಶಾಸ್ತ್ರದಲ್ಲಿದೆ; ಮತ್ತು ನಾವು ಅದನ್ನೇ ಹಗಲಿರುಳು ಧ್ಯಾನಿಸುತ್ತೇವೆ (ಕೀರ್ತನೆಗಳು 1:2).

ನಮ್ಮ ಮೊದಲ ಚರ್ಚ್ ಕ್ಯಾಲಿಫೋರ್ನಿಯಾದ ಹಾಲಿವುಡ್‌ನಲ್ಲಿ ಒಂದು ಮಾದಕವಸ್ತು ಸೇವನೆಯ ಹುದುಗುದಾಣದಲ್ಲಿ ಪ್ರಾರಂಭವಾಯಿತು. ನಾವು ಒಬ್ಬ ಮಾದಕವಸ್ತು ವ್ಯಾಪಾರಿಯನ್ನು (ಹಾಲಿವುಡ್‌ನಲ್ಲಿ ಅತ್ಯಂತ ಕುಖ್ಯಾತನಾದವನು) ಪ್ರಭುವಿನ ಬಳಿ ಕರೆದುಕೊಂಡುಹೋದೆವು. ಕೂಡಲೆ ಅವನಿಗೆ ಉತ್ಸಾಹ ತುಂಬಿತು. ಮಾದಕದ್ರವ್ಯ ತಾಣಕ್ಕೆ ಬಂದು ಸುವಾರ್ತೆಯನ್ನು ಬೋಧಿಸಲು ಅವನು ನಮ್ಮನ್ನು (ಸೂ ಮತ್ತು ನನ್ನನ್ನು) ಆಹ್ವಾನಿಸಿದನು. ಒಂದು ಭಾನುವಾರದಂದು ಲಾಸ್ ಏಂಜಲಿಸ್ ಪೇಟೆಯಲ್ಲಿರುವ ಸಿಸ್ಟರ್ ಜೆರಿ’ಸ್ ಗಾಸ್ಪೆಲ್ ಮಿಷನ್‌ನಲ್ಲಿ ನಮ್ಮ ಚರ್ಚ್ ಪ್ರಾರ್ಥನಾಸಭೆಯನ್ನು ಮುಗಿಸಿದ ನಂತರ ಅಲ್ಲಿಗೆ ಹೋದೆವು.

ಮಾದಕವಸ್ತು ತಾಣವಿದ್ದ ಕಾರ್ಲಾಸ್ ಅವೆನ್ಯೂನಲ್ಲಿದ್ದ ಒಂದು ದೊಡ್ಡ ಮನೆಗೆ ಹೋದೆವು. ಅದು ಜನರಿಂದ (ಮಾದಕವ್ಯಸನಿಗಳು) ತುಂಬಿತ್ತು. ನಾನು ನನ್ನ ಸಾಕ್ಷಿ ಹೇಳಿದೆ ಮತ್ತು ಸೂಸಿ ನರಕದ ಬೆಂಕಿ ಮತ್ತು ಗಂಧಕವನ್ನು ಅವರಿಗೆ ಬೋಧಿಸಿದರು. ಅವರು ತಮ್ಮ ಮನಸ್ಸುಗಳನ್ನು, ತಮ್ಮ ದೇಹಗಳನ್ನು ಮತ್ತು ತಮ್ಮ ಆತ್ಮಗಳನ್ನು ಏಕೆ ಹಾಳು ಮಾಡುತ್ತಿದ್ದರು ಎಂದು ಅವರೊಂದಿಗೆ ಆಕೆ ವಿಚಾರ ಮಾಡಿದರು. ಅವರೆಲ್ಲರೂ ರಕ್ಷಣೆ ಹೊಂದಿದರು, ಮತ್ತು ಅದು ನಮ್ಮ ಮೊದಲ ಚರ್ಚ್ ಆಯಿತು. ಅಂದಿನಿಂದ, ದೊಡ್ಡ ಗೋಳಾಟ ಆರಂಭವಾಗಿದೆ. 1964ರಿಂದ ನಾವು ಜಗತ್ತಿನೆಲ್ಲೆಡೆ ಚರ್ಚ್ ಗಳನ್ನು ಪ್ರಾರಂಭಿಸಿದ್ದೇವೆ. ನಾವು ದೇವರ ಪ್ರತಿಪಾದನೆಗನುಗುಣವಾಗಿ ಅವುಗಳನ್ನು ಸ್ಥಾಪಿಸಿದ್ದೇವೆ, ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯ ಮೇರೆಗಲ್ಲ.

ಸುಳ್ಳು ಪ್ರವಾದಿ ಸೃಷ್ಟಿಸಿದ ಮೃಗವಾಗಿರುವ, ಕ್ಯಾಥೊಲಿಕ್ ಕುಪಂಥವು ಸಂಯುಕ್ತ ರಾಷ್ಟ್ರವನ್ನೂ ಸ್ಥಾಪಿಸಿತು.[10] ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯನ್ನು ಪಾಲಿಸದ ನಾವು, ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವೆವು. ನಾವು ತಕ್ಕ ಕಾಲದಲ್ಲಿ ಫಲಕೊಡುತ್ತೇವಲ್ಲಾ (ಆತ್ಮಗಳನ್ನು); ನಮ್ಮ ಎಲೆ ಬಾಡುವುದೇ ಇಲ್ಲ; ಅದರಂತೆ ನಮ್ಮ ಕಾರ್ಯವೆಲ್ಲವೂ ಸಫಲವಾಗುವುದು (ಕೀರ್ತನೆಗಳು 1:3).

ಕೀರ್ತನೆಗಳು 1:4-5 ಹೀಗೆಂದು ಹೇಳುತ್ತವೆ, “ದುಷ್ಟರೋ ಹಾಗಲ್ಲ; ಗಾಳಿಯಿಂದ ತೂರಿಕೊಂಡು ಹೋಗುವ ಹೊಟ್ಟಿನಂತಿದ್ದಾರೆ. ಆದ್ದರಿಂದ ದುಷ್ಟರು ನ್ಯಾಯವಿಚಾರಣೆಯಲ್ಲೂ [ಪಶ್ಚಾತ್ತಾಪವಿಲ್ಲದ] ಪಾಪಾತ್ಮರು ನೀತಿವಂತರ ಸಭೆಯಲ್ಲೂ ನಿಲ್ಲುವುದಿಲ್ಲ.”

ರೋಮಾಪುರದವರಿಗೆ 13:4-5 ಹೀಗೆಂದು ಹೇಳುತ್ತದೆ: ಅವನು ನಿನ್ನ ಹಿತಕ್ಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ. “ಆದರೆ ನೀನು ಕೆಟ್ಟದ್ದನ್ನು [ಅಂದರೆ ತಮ್ಮ ಪ್ರತಿಪಾದನೆಯನ್ನು ಜಾರಿಗೆ ತರಲು ಯು.ಎನ್. ಮೇಲೆ ಪ್ರಭಾವ ಬೀರುವ ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯನ್ನು ಪಾಲಿಸುವುದು] ಮಾಡಿದರೆ ಭಯಪಡಬೇಕು; ಅವನು [ದೇವರ ಸೇವಕ] ಸುಮ್ಮನೆ ಕೈಯಲ್ಲಿ ಕತ್ತಿಯನ್ನು [ದೇವರ

**8** ಮತ್ತಾಯ 23:23-28 **9** ಟೆಕ್ಸಾರ್ಕಾನಾ ಗಜೆಟ್,ಸಂಪುಟ 132, No. 313, ನವೆಂಬರ್ 8, 2008, ಪುಟ 1A-2A

**10** ಪ್ರಕಟನೆ 13:1-14, 16:13-14, ಅಧ್ಯಾಯ 17, 18:1-3, 24, 19:19-20



## ಕೀನ್ಯಾ

ಪ್ಯಾಸ್ಟರ್ ಟೋನಿ ಅವರಿಗೆ ನಮಸ್ಕಾರ!

ನಾನು, ದೇವರ ರಾಜ್ಯಕ್ಕಾಗಿ ಆತ್ಮಗಳನ್ನು ಗೆಲ್ಲುವ ಈ ಕಾರ್ಯದಲ್ಲಿ, ನಿಮ್ಮ ಸುವಾರ್ತಾ ಸಾಹಿತ್ಯವನ್ನು [ಸ್ವಾಹೀಲಿಯಲ್ಲಿ] ನನ್ನ ಗ್ರಾಮದಲ್ಲಿ ಹಂಚಿಕೊಳ್ಳುತ್ತಿದ್ದೇನೆ. ದೇವರು ನಿಮಗೆ ಅನುಗ್ರಹಿಸಲಿ.

ಕ್ರಿಸ್ತರಲ್ಲಿ ನಿಮ್ಮ,

ಗಾಡ್ಫ್ರೀ ಸಿಕುಕು ಬಂಗೋಮ, ಕೀನ್ಯಾ





ಪದ, ಅದೇ ಕತ್ತಿ[11]] ಹಿಡಿದಿಲ್ಲ; ಅವನು ದೇವರ ಸೇವಕನಾಗಿದ್ದು ಕೆಟ್ಟದ್ದನ್ನು ನಡೆಸುವವನಿಗೆ ದೇವರ ದಂಡನೆಯನ್ನು ವಿಧಿಸುತ್ತಾನೆ. ಆದಕಾರಣ ದಂಡನೆಯಾದೀತೆಂದು ಮಾತ್ರವಲ್ಲದೆ ಮನಸ್ಸಿಗೆ ನ್ಯಾಯವಾಗಿ ತೋರುವುದರಿಂದಲೂ ಅವನಿಗೆ ಅಧೀನನಾಗಿರುವುದು ಅಗತ್ಯ.(ಮನಃಸಾಕ್ಷಿಗಾಗಿ)"

ಯೇಸು ಹೇಳಿದರು, "ದಣಿಗಿಂತ ಆಳು ದೊಡ್ಡವನಲ್ಲವೆಂಬುದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕ ಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಈಡೇರಿಸುತ್ತ ನಡೆದರೆ ನಿಮ್ಮ ಮಾತನ್ನು ಸಹ ಈಡೇರಿಸುತ್ತ ನಡೆಯುವರು. ಆದರೆ ಅವರು ನನ್ನನ್ನು ಕಳುಹಿಸಿಕೊಟ್ಟಾತನನ್ನು ತಿಳಿಯದವರಾಗಿರುವುದರಿಂದ ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತ ನಿಮಗೆ ಮಾಡುವರು. ನಾನು ಬಂದು ಅವರೊಂದಿಗೆ ಮಾತಾಡದಿದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಅವರು ಮಾಡಿದ ಪಾಪಕ್ಕಾಗಿ ಅವರಿಗೆ ಈಗ ನೆವವಿಲ್ಲ. ನನ್ನ ಮೇಲೆ ದ್ವೇಷ ಮಾಡುವವನು ನನ್ನ ತಂದೆಯ ಮೇಲೆಯೂ ದ್ವೇಷಮಾಡುವವನಾಗಿದ್ದಾನೆ. ಮತ್ತಾರೂ ನಡೆಸದ ಕ್ರಿಯೆಗಳನ್ನು ನಾನು ಅವರಲ್ಲಿ ನಡೆಸದೇ ಇದ್ದರೆ ಅವರಿಗೆ ಪಾಪವು ಇರುತ್ತಿರಲಿಲ್ಲ; ಆದರೆ ಈಗ ಅವರು ನೋಡಿದ್ದಾರೆ; ಆದರೂ ನನ್ನ ಮೇಲೆಯೂ ನನ್ನ ತಂದೆಯ ಮೇಲೆಯೂ ದ್ವೇಷಮಾಡಿದ್ದಾರೆ. ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿಸಿದರು ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು ನೆರವೇರುವ ರೀತಿಯಲ್ಲಿ ಹೀಗಾಯಿತು" (ಯೆಶಾಯ 53:3, ಯೋಹಾನ 15:20-25).

ನಾವು ಈಗ ದೇವರ ಎರಡು ಸಾಕ್ಷಿಗಳು ದೂರದರ್ಶನದ ಮೂಲಕ ಎಲ್ಲರಿಗೂ ಪ್ರಕಟವಾಗುವ ಕಾಲದಲ್ಲಿ ಬದುಕುತ್ತಿದ್ದೇವೆ. ಆ ಇಬ್ಬರು ಸಾಕ್ಷಿಗಳು, ಲೋಕದ ಎಲ್ಲಾ ಜನರು ನಿರಾಕರಿಸುವ ದೇವರ ಪ್ರತಿಪಾದನೆಯನ್ನು ಬೋಧಿಸುವವರು. ಮೃಗವು ವಿಶ್ವ ಸರ್ಕಾರವು, ಮೇಲೆದ್ದು ಅವರನ್ನು ಕೊಲ್ಲುತ್ತದೆ. ಏಕೆಂದರೆ ಅವರು ದೇವರ ಪದದೊಂದಿಗೆ ಭೂಮಿಯ ಮೇಲಿರುವ ಜನರನ್ನು ನಿರಂತರವಾಗಿ ಹಿಂಸೆಪಡಿಸುತ್ತಾರೆ (ಪ್ರಕಟನೆ 11:3-12). ಅವರ ಮೃತ ದೇಹಗಳು ಯೆರೂಸಲೇಮಿನ ಬೀದಿಗಳಲ್ಲಿ 3½ ದಿನಗಳ ವರೆಗೆ ಬಿದ್ದಿರುವುದನ್ನು ನೋಡಲು ಲೋಕದ ಜನರಿಗೆ ಎಷ್ಟು ಸಂತೋಷವಾಗುತ್ತದೆ ಎಂದರೆ ಅವರ ಸಾವನ್ನು ಆಚರಿಸಲು ಅವರು ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕಳುಹಿಸುತ್ತಾರೆ. ನಂತರ ಈ ಇಬ್ಬರು ಸಾಕ್ಷಿಗಳ ಮೃತದೇಹಗಳೊಳಗೆ ಜೀವಾತ್ಮವು ಪ್ರವೇಶಿಸುತ್ತದೆ. ಅವರು ತಮ್ಮ ಕಾಲುಗಳ ಮೇಲೆದ್ದು ನಿಂತು ಶಾಶ್ವತವಾಗಿ ಸ್ವರ್ಗದಲ್ಲಿರಲು, ಕ್ರಿಸ್ತರೊಂದಿಗೆ ಬಾಳಲು ಪರಲೋಕಕ್ಕೆ ಮೇಲೆ ಹತ್ತುತ್ತಾರೆ (ಪ್ರಕಟನೆ 11:11-12).

ಹೇಳಿ, ನೀವು ದೇವರ ಪ್ರತಿಪಾದನೆಯನ್ನು ಪ್ರೀತಿಸುತ್ತೀರೋ? ಅಥವಾ ದೈವನಿಷ್ಠೆಯಿಲ್ಲದವರ ಪ್ರತಿಪಾದನೆಯನ್ನು ಪ್ರೀತಿಸುತ್ತೀರೋ? ನೀವು

*(ಪುಟ 4ರಲ್ಲಿ ಮುಂದುವರಿದಿದೆ)*

11 ಎಫೆಸದವರಿಗೆ 6:17, ಇಬ್ರಿಯರಿಗೆ 4:12, ಪ್ರಕಟನೆ 1:13-18, 2:12-16, 19:11-16, 21

## ಭಾರತ

ಕ್ರಿಸ್ತರಲ್ಲಿ ಅತ್ಯಂತ ಪ್ರಿಯರೇ,

ಸಾಹಿತ್ಯ ಮತ್ತು ಒಂದು ಬೈಬಲ್ ನ ಪ್ರೀತಿಯ ಪ್ಯಾಕೇಜಿಗಾಗಿ ನಿಮಗೆ ಧನ್ಯವಾದಗಳು. ನಾನು ಸಂದೇಶಗಳನ್ನು ಅಧ್ಯಯನ ಮಾಡಿದೆನು ಮತ್ತು ಕ್ರಿಸ್ತರ ಬಗ್ಗೆ ಮತ್ತು ಶಿಷ್ಯರಾಗಲು ಕ್ರಿಸ್ತರಲ್ಲಿ ಇತರರನ್ನು ಪ್ರೇರೇಪಿಸುವ ಬಗ್ಗೆ ಹೆಚ್ಚು ಜ್ಞಾನವನ್ನು ಪಡೆದುಕೊಂಡೆನು. ನೀವು ಮಾಡುತ್ತಿರುವ ಅದ್ಭುತ ಕಾರ್ಯಕ್ಕಾಗಿ ನಾನು ದೇವರಿಗೆ ಬಹಳ ಕೃತಜ್ಞನಾಗಿದ್ದೇನೆ. ಆ ಸಾಹಿತ್ಯವು ನಮ್ಮ ಮಿನಿಸ್ಟ್ರಿಯಲ್ಲಿ ಬಹಳ ಪ್ರಯೋಜನಕಾರಿಯಾಗಿದೆ. ಪ್ರತಿಯೊಬ್ಬರೂ ಪ್ರಭುವಿನ ಬಗ್ಗೆ ಓದಬೇಕು ಮತ್ತು ತಿಳಿದುಕೊಳ್ಳಬೇಕು, ಯೇಸುವನ್ನು ಸ್ವೀಕರಿಸಬೇಕು ಮತ್ತು ನಿಮ್ಮ ಸಾಹಿತ್ಯವನ್ನು ಓದಿ ರಕ್ಷಣೆ ಹೊಂದಬೇಕು. ನಾವು ನಿಮಗಾಗಿ ಪ್ರಾರ್ಥಿಸುವಂತೆಯೆ ದಯವಿಟ್ಟು ನಮಗಾಗಿ ಕೂಡ ಪ್ರಾರ್ಥಿಸಿರಿ.

ದೇವರ ಸೇವಕ,

ಎ. ಅರ್ಜುನ್ ರಾವ್ — ಆಂಧ್ರ ಪ್ರದೇಶ, ಭಾರತ

## ನಮ್ಮ ಅನುವಾದ ವಿಭಾಗದಿಂದ

*ನಮ್ಮ ಜೂಲೂ ಅನುವಾದಕರಿಂದ*

ಪ್ಯಾಸ್ಟರ್ ಅಲಾಮೊ ಅವರ ಸಂದೇಶಗಳನ್ನು ಓದುವ ಮೂಲಕ ನಾವು ಬಹಳ ಅನುಗ್ರಹಿತರಾಗಿದ್ದೇವೆ. ಯೂನಿವರ್ಸಿಟಿ ಕ್ಯಾಂಪಸ್ ಯೂತ್ ಮಿನಿಸ್ಟ್ರಿಯೊಂದಿಗಿರುವ ನನ್ನ ಗಂಡನಿಗೆ ಹೆಚ್ಚಿನ ಸಾಹಿತ್ಯವನ್ನು ಓದಿ ಬಹಳ ಸಂತೋಷವಾಗಿದೆ ಮತ್ತು ಅದರೊಂದಿಗೆ ದೇವರು ಹೆಚ್ಚು ಜೀವಗಳನ್ನು ಮುಟ್ಟುತ್ತಿದ್ದಾರೆ ಎಂದು ಅವರು ನಂಬುತ್ತಾರೆ. ದೇವರು ನಿಮಗೆ ಅನುಗ್ರಹಿಸಲಿ,

ಸಿಂಡಿ — ವೆಸ್ಟರ್ನ್ ಕೇಪ್, ದಕ್ಷಿಣ ಆಫ್ರಿಕಾ

*ನಮ್ಮ ಸ್ವಾಹಿಲಿ ಅನುವಾದಕರಿಂದ*

ಪ್ಯಾಸ್ಟರ್ ಟೋನಿ ಅವರ ಸಾಹಿತ್ಯವು ನನ್ನ ಕಣ್ಣುಗಳನ್ನು ಎಷ್ಟರ ಮಟ್ಟಿಗೆ ತೆರೆದಿದೆ ಎಂದರೆ ಈಗ ನಾನು ರೇಡಿಯೊದಲ್ಲಿ ಬೋಧಕರನ್ನು ಕೇಳಿದಾಗ ನನಗೆ ಸತ್ಯ ತಿಳಿದಿದೆ ಮತ್ತು ಸುಳ್ಳು ಬೋಧಕರನ್ನು ಆಫ್ ಮಾಡಿಬಿಡುತ್ತೇನೆ. ನಾನು ಸಾಹಿತ್ಯದ ಕರಡಚ್ಚನ್ನು ತಿದ್ದುವಾಗ ನಾನು ಅದನ್ನು ಬಹಳ ಜಾಗರೂಕತೆಯಿಂದ ಓದುತ್ತೇನೆ ಮತ್ತು ನಾನು ಸಂಪೂರ್ಣವಾಗಿ ಆಧ್ಯಾತ್ಮಿಕವಾಗಿ ಉತ್ತಮಗೊಳ್ಳುತ್ತಿದ್ದೇನೆ. ಪ್ಯಾಸ್ಟರ್ ಟೋನಿ ಬಹಳ ಜೀವಗಳನ್ನು ಮುಟ್ಟುತ್ತಿದ್ದಾರೆ.

ಧನ್ಯವಾದಗಳು

*ನಮ್ಮ ಆರ್ಮೇನಿಯನ್ ಅನುವಾದಕರಿಂದ*

ನಾನು ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ಮೇಲೆ ಕೆಲಸ ಮಾಡದೆ ಒಂದು ದಿನ ಕಳೆದರೆ ನನಗೆ ಕಿಂಚಿತ್ತೂ ಸಮಾಧಾನವೆನಿಸುವುದಿಲ್ಲ. ನನ್ನ ಆತ್ಮ ಪ್ಯಾಸ್ಟರ್ ಟೋನಿ ಅವರ ಸಾಹಿತ್ಯದ ಮೇಲೆ ಅವಲಂಬಿತವಾಗಿದೆ. ಅದರ ಮೇಲೆ ಕೆಲಸ ಮಾಡಲು ನನಗೆ ಸಾಧ್ಯವಾಗಿರುವುದರಿಂದ ನಾನು ಧನ್ಯನಾಗಿದ್ದೇನೆ. ನಾನು ತಿಳಿದುಕೊಳ್ಳುವ ಎಲ್ಲದರ ಬಗ್ಗೆ ನಾನು ನನ್ನ ಎಲ್ಲಾ ಗೆಳೆಯರಿಗೆ ಮತ್ತು ಸಹೋದ್ಯೋಗಿಗಳಿಗೆ ಹೇಳುತ್ತೇನೆ.

*ನಮ್ಮ ಚೆಚೆವ ಅನುವಾದಕರಿಂದ*

ನೀವು ನನಗೆ ಕೊಡುವ ಕೆಲಸಗಳಿಗಾಗಿ ನಾನು ದೇವರಿಗೆ ಕೃತಜ್ಞಳಾಗಿದ್ದೇನೆ. ಅವು ನನ್ನ ಬದುಕಿನಲ್ಲಿ ಒಂದು ಅನುಗ್ರಹ, ಒಂದು ಶಸ್ತ್ರ. ನಿಮ್ಮ ಸುದ್ದಿಪತ್ರಿಕೆಗಳನ್ನು ಅನುವಾದ ಮಾಡುವ ಪ್ರತಿ ಬಾರಿಯೂ ನಾನು ದೇವರ ನಿಜವಾದ ಸುವಾರ್ತೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳುತ್ತಿರುತ್ತೇನೆ. ಪ್ಯಾಸ್ಟರ್ ಟೋನಿ ಅಲಾಮೊ ಅವರ ಬದುಕಿಗಾಗಿ ನಾನು ದೇವರಿಗೆ ಕೃತಜ್ಞಳಾಗಿದ್ದೇನೆ. ದಿವ್ಯ ದೇವದೂತರು ಅವರ ಕಾವಲಿರಲಿ ಮತ್ತು ಅವರನ್ನು ರಕ್ಷಿಸಲಿ.

ದೇವರ ಅನುಗ್ರಹವಿರಲಿ!!!

ಡೋರಿಸ್ — ಜೊಹಾನ್ಸ್ ಬರ್ಗ್, ದಕ್ಷಿಣ ಆಫ್ರಿಕಾ

## ಮೆಕ್ಸಿಕೊ

*(ಸ್ಪ್ಯಾನಿಷ್ ಭಾಷೆಯಿಂದ ಭಾಷಾಂತರಿಸಲಾಗಿದೆ)*

ಪ್ರಿಯ ಪ್ಯಾಸ್ಟರ್ ಅಲಾಮೊ,

ನಾನು ನಿಮಗೆ ಹೃತ್ಪೂರ್ವಕ ನಮಸ್ಕಾರಗಳನ್ನು ಕಳುಹಿಸುತ್ತಿದ್ದೇನೆ. ನೀವು ಚೆನ್ನಾಗಿರುವಿರಿ ಮತ್ತು ಅನುಗ್ರಹದಿಂದ ತುಂಬಿರುವಿರಿ ಎಂದು ಮನಸಾರೆ ಬಯಸುತ್ತೇನೆ. ನಾನು ನಿಮ್ಮ ಸುದ್ದಿಪತ್ರಿಕೆಗಳನ್ನು ಪಡೆದಿದ್ದೇನೆ ಮತ್ತು ನೀವು ಬರೆಯುವ ಎಲ್ಲವೂ ನನಗೆ ಅರ್ಥವಾಗುತ್ತದೆ. ನಿಮ್ಮ ಮಿನಿಸ್ಟ್ರಿ ವಿಶ್ವದ ವಿವಿಧ ಭಾಗಗಳಲ್ಲಿ ಪ್ರಚಾರವಾಗುತ್ತಿದೆ ಎಂದು ನನಗೆ ಅರಿವಾಗಿದೆ. ಒಂದು ದಿನ ನಾನು ಇದರ ಭಾಗವಾಗಲು ಬಯಸುತ್ತೇನೆ. ನೀವು ಈ ಬಹಳ ಅಮೂಲ್ಯವಾದ ಮಾಹಿತಿಯನ್ನು ನನಗೆ ಕಳುಹಿಸುವುದನ್ನು ಮುಂದುವರಿಸಿದರೆ ನಾನು ಅಪಾರವಾಗಿ ಕೃತಜ್ಞನಾಗಿರುತ್ತೇನೆ; ಇದು ನನ್ನ ಮನಸ್ಸನ್ನು ತಿಳಿಗೊಳಿಸುತ್ತದೆ ಮತ್ತು ಪ್ರತಿದಿನ ಮುಂದುವರಿಯಲು ನೆರವಾಗುತ್ತದೆ. ನಿಮ್ಮ ಎಲ್ಲಾ ಪ್ರಯತ್ನಗಳಿಗಾಗಿ ನಿಮಗೆ ಧನ್ಯವಾದಗಳು.

ವಿನಯದಿಂದ,

ಇಸ್ರೇಲ್ ಪೆರೆಜ್ — ಡ್ಯುರಾಂಗೊ, ಮೆಕ್ಸಿಕೊ



ಅಲಾಮೊ ಮಿನಿಸ್ಟ್ರೀಸ್ ಆನ್‌ಲೈನ್

www.alamoministries.com

https://twitter.com/tonyalamominist

https://www.youtube.com/user/PastorTonyAlamo

https://www.facebook.com/pages/TONY-ALAMO-Christian-Ministries/729439147079523?fref=ts

# ವಿಶ್ವ ಪ್ರತಿಪಾದಕರ ಮಂಡಳಿ

*(ಪುಟ 1 ರಿಂದ ಮುಂದುವರಿದಿದೆ)*

ದೇವರ ಪ್ರತಿಪಾದನೆಯನ್ನು ಎಷ್ಟು ಪ್ರೀತಿಸುತ್ತೀರೆಂದರೆ ಈ ಕೊನೆಯ ದಿನಗಳಲ್ಲಿ ನಿಮ್ಮೊಳಗೆ ಕೆಲಸ ಮಾಡಲು ಆತನಿಗೆ ಅವಕಾಶ ಕೊಡುತ್ತೀರೆಂದಾದರೆ ಈ ಪ್ರಾರ್ಥನೆಯನ್ನು ಹೇಳಿ ರಕ್ಷಣೆ ಹೊಂದಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[12] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬುತ್ತೇನೆ.[13] ಆತನು ಶಿಲುಬೆಯ ಮರಣ ಹೊಂದಿದನು ಮತ್ತು ನನ್ನ ಹಿಂದಿನ ಎಲ್ಲಾ ಪಾಪಗಳ ಕ್ಷಮಾಪಣೆಗಾಗಿ ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬುತ್ತೇನೆ.[14] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[15] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ  ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬುತ್ತೇನೆ.[16] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[17] ಕಾಲ್ವಾರಿಯ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿರಿ.[13] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ವಾಕ್ಯವಾದ ಬೈಬಲ್ ಹೀಗೆಂದು ಹೇಳುತ್ತದೆ.[18] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ವಾಕ್ಯ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[19] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[20] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[21]**

---

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ದೀಕ್ಷಾಸ್ನಾನ ಪಡೆದರು.[22] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನಿಮ್ಮ ಪ್ರಯೋಜನಕ್ಕಾಗಿ ಹಾಗೂ ಇತರರ ಪ್ರಯೋಜನಕ್ಕಾಗಿ ಅದು ಹೇಳಿದ್ದನ್ನು ಮಾಡಿ.[23]

ಕ್ರಿಸ್ತರು ಮತ್ತು ದೇವರಾದ ತಂದೆ ಈಗ ಪವಿತ್ರಾತ್ಮರ ಮೂಲಕ ನಿಮ್ಮಲ್ಲಿ ನೆಲೆಗೊಂಡಿದ್ದಾರೆ. ದೇವರ ದೈವಿಕ ಸ್ವರೂಪದ ಪೂರ್ಣ ಪ್ರಮಾಣವನ್ನು ಹೊಂದಲು ನಿಮಗೊಂದು ದಾರಿಯಿದೆ. ದೇವರ ದೈವಿಕ ಸ್ವರೂಪವು ನಮ್ಮಲ್ಲಿ ಹೆಚ್ಚು ಹೆಚ್ಚು ನೆಲೆಗೊಂಡಂತೆಲ್ಲಾ ಸಹಸ್ರಾರು ಕ್ರೈಸ್ತರು ಸುಲಭವಾಗಿ ರಕ್ಷಣೆಯಿಂದ ವಿಮುಖರಾಗುವಂತೆ ಮಾಡಿದ ಶೋಧನೆಗಳ ವಿರುದ್ಧ  ಹೋರಾಡಲು ನಿಮ್ಮನ್ನು ಹೆಚ್ಚು ಸಮರ್ಥರನ್ನಾಗಿ ಮಾಡುತ್ತದೆ. ಪವಿತ್ರಾತ್ಮದಿಂದ ದೀಕ್ಷಾಸ್ನಾನ ಪಡೆಯುವುದಕ್ಕಾಗಿ ಪ್ರಾರ್ಥಿಸಿ. ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೇಗೆ ಪಡೆಯುವುದು ಎಂಬ ಕುರಿತ ಸೂಚನೆಗಳನ್ನು ಮತ್ತು ದೇವರ ಪವಿತ್ರ ಸ್ವರೂಪವನ್ನು ಪಡೆಯಲು ನಮ್ಮ ಸಾಹಿತ್ಯಕ್ಕಾಗಿ ವಿಚಾರಿಸಿ ಅಥವಾ ಕರೆಮಾಡಿ. ಏಕೆಂದರೆ ಪವಿತ್ರತೆಯಿಲ್ಲದೆ, ಯಾವೊಬ್ಬನೂ ದೇವರನ್ನು ಕಾಣಲಾರನು (ಇಬ್ರಿಯರಿಗೆ 12:14)

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

**12** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **13** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **14** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **15** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **16** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **17** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **18** ಎಫೆಸದವರಿಗೆ2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **19** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **20** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **21** ಇಬ್ರಿಯರಿಗೆ 11:6 **17** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **22** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **23** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**

**www.alamoministries.com • taoffice@alamoministries.com**

**ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.**

**ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.**

**333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.**

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ  ವ್ಯವಸ್ಥೆ ಮಾಡಲಾಗುವುದು.*

**ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).**

**ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.**

**ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.**

**ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:**

©ಕೃತಿಸ್ವಾಮ್ಯ ಜುಲೈ 2015    ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ ವಿಶ್ವ ಪ್ಯಾಸ್ಟರ್ ಟೋನಿ ಅಲಾಮೊ    ® ನೋಂದಣಿ ಜುಲೈ 2015

KANNADA—VOLUME 21800—*THE WORLD COUNSEL*